ಆದರೆ ತಾವು ಪರಿಶೀಲನೆ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದೀರಿ. ಆದಷ್ಟು ಬೇಗನೆ ಇದನ್ನು ಪರಿಗಣಿಸಿ ಕೂಡಲೇ ಈ ಕೆಲಸ ಮಾಡಬೇಕೆಂದು ತಮ್ಮನ್ನು ಕೇಳುತ್ತಿದ್ದೇನೆ. ಜೊತೆಗೆ ಸವಣೂರು ಬಸ್ ಘಟಕ, ಅದರ ಬಗ್ಗೆಯೂ 12 ಎಕರೆ 13 ಗುಂಟೆ ಜಮೀನನ್ನು ತಾವು ಭೂಸ್ವಾಧೀನ ಪಡಿಸಿಕೊಂಡಿದ್ದೀರಿ, ಭೂಸ್ವಾಧೀನ ಪಡಿಸಿಕೊಂಡು ಕಬ್ಜಾವನ್ನು ತೆಗೆದುಕೊಂಡಿದ್ದೇವೆಂದು ಹೇಳಿದ್ದೀರಿ. ಆದರೆ ಭೂಮಿಯ ಬೆಲೆ ಮತ್ತು ಭೂಮಿಯ ಹಕ್ಕುದಾರರ ಬಗ್ಗೆ ಒಂದು ವಿವಾದ ಇದೆಯೆಂದು ಹೇಳಿದಿರಿ. ವಿವಾದದ ಪ್ರಶ್ನೆ ಬೇರೆ. ಈಗಾಗಲೇ ತಾವು ಜಮಿನನ್ನು ತೆಗೆದುಕೊಂಡಿದ್ದೀರಿ. ಯಾರೋ ಒಬ್ಬ ಅಪರಚಿತ who is in no way concerned with that property has filed a suit in the court of law. ಈ ಘಟಕವನ್ನು ತಾವು ನಿರ್ಮಾಣ ಮಾಡಬೇಕು. ಏಕೆಂದರೆ ತಾವು ವಿವಾದ ಇದೆಯೆಂದು ಬಿಡುವುದರಿಂದ ಇದು ಬಹಳಷ್ಟು ತಡವಾಗುತ್ತದೆ ಜೊತೆಗೆ ಅದು ಕೋಟ್ಯಾಂತರ ರೂಪಾಯಿಯ ಆಸ್ತಿ ಅವನು ಪರಿಹಾರ ಹಣ ಕೇಳಬಹುದು. ನಾವು ಕೊಡುತ್ತೇವೆ ಬೇಕಾದರೆ. ಆದ್ದುರಿಂದ ತಾವು ಕೂಡಲೆ ಈ ಘಟಕವನ್ನು ಪ್ರಾರಂಭ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ನಿಮ್ಮ ಅದೃಷ್ಟ ಚೆನ್ನಾಗಿ ಇದೆ. ಮೊದಲು ಏನಾದರೂ ಈ ಪ್ರಶ್ನೆ ಬಂದಿದ್ದರೆ ವಿಶ್ವೇಶ್ವರ ಹೆಗಡೆಯವರ ಪ್ರಶ್ನೆ ಆ ಮೇಲೆ ಬಂದಿದ್ದರೆ ನಿಮಗೆ ಪಜೀತಿ ಆಗುತ್ತಿತ್ತು.

ಶ್ರೀ ಕೆ.ಎಸ್. ಬೀಳಗಿ : ಮಾನ್ಯ ಸಭಾಧ್ಯಕ್ಷರೆ, ಈ ಶಿಗ್ಗಾಂವ್‌ನಲ್ಲಿ ಬಸ್ ಸ್ಟ್ಯಾಂಡ್ ಕಟ್ಟುವುದು ಏನೂ ತಡವಾಗುವುದಿಲ್ಲ. ಏಕೆಂದರೆ ಟೆಂಡರ್ ಕರೆದಿದ್ದೇವೆ. ಕಳೆದ ತಿಂಗಳು 29ನೇ ತಾರೀಖು ಕೊನೆಯ ದಿನಾಂಕವಾಗಿತ್ತು. ಈಗ ಟೆಂಡರ್ ಬಂದಿದೆ. ಅದು ಪರಿಶೀಲನೆಯಾಗಿ ಆದಷ್ಟು ಬೇಗನೆ ಬಸ್ ಸ್ಟ್ಯಾಂಡ್ ಕಟ್ಟಿಸವುದಕ್ಕೆ ಪ್ರಾರಂಭ ಮಾಡುತ್ತೇವೆ. ಆದರಲ್ಲಿ ಏನೂ ಸಮಸ್ಯೆಯಿಲ್ಲ, ಸವಣೂರುನಲ್ಲಿ ಬಸ್ ಘಟಕ ಸ್ಥಾಪಿಸಲು 5-6 ಲಕ್ಷ ರೂಪಾಯಿ ಹಣವನ್ನು ಒದಗಿಸಿದ್ದಾರೆ, ಬಹಳ ಸಂತೋಷ. ಇದು ತಮಗೂ ಗೊತ್ತಿದೆ. ಇನ್ನು ಸ್ವಲ್ಪ ಹಣ ಡಿಪೋ ಮಾಡುವುದಕ್ಕೆ ಕೊಡುತ್ತೇವೆಂದು ಹೇಳಿದ್ದಾರೆ. ಅದು ಏನಾಗಿದೆಯೆಂದರೆ. ಅದು it is property under court order ಡಿ.ಸಿ. ಯವರು ಲ್ಯಾಂಡ್ ಕೊಟ್ಟಿದ್ದಾರೆ. ನಮ್ಮ ಸ್ವಾಧೀನದಲ್ಲಿ ಇದೆ. ಕೆಲವರು claim accept ಮಾಡಿ ಕೋರ್ಟಿಗೆ ಹೋಗಿದ್ದಾರೆ. ಕೆಳಗಿನ ಕೋರ್ಟಿನಲ್ಲಿ ಅವರ ಕಡೆಗೆ ಆಗಿದೆ. ಈಗ ಅದರ ಮೇಲೆ ಡಿ.ಸಿ. ಯವರು ಅಪೀಲ್ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದಾರೆ. ಇದು ಒಂದು ನೋಟ. ಅದನ್ನು ಕಟ್ಟಬಾರದು ಎಂದು ನಮಗೆ ಸ್ಟೇ ಎನೂ ಇಲ್ಲ. ಆದರೆ ಒಂದು ಸಲ ಶುರು ಮಾಡಿದ ಮೇಲೆ ಕೋರ್ಟ್‌ನಿಂದ ಸ್ಟೇ ಬಂದರೆ ಮತ್ತೆ ಅದೆಲ್ಲಾ ವೇಸ್ಟ್ ಆಗುತ್ತದೆ. ಎನ್ನುವುದನ್ನು ದೃಷ್ಟಿಯಲ್ಲಿಟ್ಟುಕೊಂಡರು. ನಾವು ಪ್ರಯತ್ನ ಮಾಡುತ್ತಿದ್ದೇವೆಂದು. ಅವರಿಗೂ ಗೊತ್ತಿದೆ. ಅಲ್ಲಿ 7-8 ಶೆಡ್ಡುಗಳು ಇವೆ, ಆ ಶೆಡ್ಡುಗಳಲ್ಲೇ ಡಿಪೋವನ್ನು ಪ್ರಾರಂಭ ಮಾಡುವುದಕ್ಕೆ ಸಾಧ್ಯವಿದ್ದರೆ ಪ್ರಾರಂಭಮಾಡಬೇಕು ಎನ್ನುವಂಥ ವಿಚಾರವನ್ನು ಮಾಡುತ್ತಾ ಇದ್ದೇವೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಮಂಜನಾಥ ಸಿ. ಕುನ್ನೂರ್ : ಆದಷ್ಟು ಬೇಗನೆ ತಾವು ತ್ಯಾರ್ತಿಕವಾಗಿಯಾದರೂ ಅದನ್ನು ಪ್ರಾರಂಭ ಮಾಡಿ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಸಿಬ್ಬಂದಿಗೆ ಪ್ರೋತ್ಸಾಹ ಧನ

460 - ಶ್ರೀ ಎಸ್.ಎ. ರವೀಂದ್ರನಾಥ್ (ಮಾಯಕುಂಡ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಆದಾಯ ಹೆಚ್ಚಿಸುವ ಸಿಬ್ಬಂದಿಗೆ ಪ್ರೋತ್ಸಾಹ ಧನ ನೀಡುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ.ಬಿ. ನಿಂಗಯ್ಯ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಈ ರೀತಿಯ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

ಅಧ್ಯಕ್ಷರು : ಮಾರುಕಟ್ಟೆ ಸಚಿವರ ಪರವಾಗಿ ತೋಟಗಾರಿಕೆ ಸಚಿವರು ಉತ್ತರ ಕೊಡಬೇಕು. ಅವರು ನನ್ನ ಅನುಮತಿಯನ್ನು ಪಡೆದುಕೊಂಡಿದ್ದಾರೆ.

ಶ್ರೀ ಎಸ್.ಎ. ರವೀಂದ್ರನಾಥ್ : ಮಾನ್ಯ ಸಭಾಧ್ಯಕ್ಷರೆ, ಮಂತ್ರಿಗಳು ಕೊಟ್ಟಿರುವ ಉತ್ತರ ಸೂಕ್ತವಾಗಿಲ್ಲ. ನಾನು ಕೇಳಿರತಕ್ಕಂಥದ್ದೇನೆಂದರೆ ಅಲ್ಲಿಯ ನೌಕರರು ಸಾಕಷ್ಟು ಕೆಲಸ ಮಾಡಿದರೂ ಸಹ ಅವರಿಗೆ ಸಾಕಷ್ಟು ಸಂಬಳ ಕೊಡುತ್ತಿಲ್ಲವೆಂದು ಕೇಳಿಬಂದಿದೆ. ಅವರು ಜಾಸ್ತಿ ದುಡಿದರೆ ಹೇಗೆ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಕಂಡಕ್ಟರುಗಳಿಗೆ ಜಾಸ್ತಿ ಕಲೆಕ್ಷನ್ ಮಾಡಿದರೆ ಶೇಕಡ 2 ರಷ್ಟು ಕೊಡುತ್ತಾರೇ ಅದೇ ರೀತಿ ಇಲ್ಲಿಯೂ ಸಹ ಕೊಡಬೇಕು ಅವರಿಗೆ ಕೊಡುತ್ತಿರತಕ್ಕಂಥ ಸಂಬಳ ಕೂಡ ಕಡಿಮೆ ಇದೆ ಅದನ್ನು ಸಹ ಜಾಸ್ತಿ ಮಾಡಬೇಕೆಂದು ಅವರು ಕೇಳುತ್ತಿದ್ದಾರೆ.

ಶ್ರೀ ಡಿ.ಜಿ. ಜಯಕುಮಾರ್ (ಕೃಷಿ ಉತ್ಪನ್ನ ಮತ್ತು ಮಾರುಕಟ್ಟೆ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಇದು ಜಾಸ್ತಿ ಕಡಿಮೆ ಎನ್ನುವ ಪ್ರಶ್ನೆ ಇಲ್ಲ. ಆ ವ್ಯವಸ್ಥೆ ಸರ್ಕಾರದ ಗಮನದಲ್ಲಿ ಇಲ್ಲ. ಶುಲ್ಕವನ್ನು ಕಲೆಕ್ಟ್ ಮಾಡುವಂಥದ್ದು ಅಧಿಕಾರಿಗಳ ಕರ್ತವ್ಯ ಹೆಚ್ಚಿಗೆ ಶುಲ್ಕವನ್ನು ಕಲೆಕ್ಟ್ ಮಾಡಿದವರಿಗೆ ಪ್ರೋತ್ಸಹ ಧನ ಕೊಡಿ ಎಂದು ಕೇಳುತ್ತಿದ್ದಾರೆ. ಆ ವ್ಯವಸ್ಥೆ ಸರ್ಕಾರದಲ್ಲಿ ಇತ್ತು. 1994ನೇ ಇಸವಿಯಲ್ಲಿ ಈ ಒಂದು ಪ್ರಸ್ತಾವನೆ ಸರ್ಕಾರದ ಮುಂದೆ ಬಂದಿತ್ತು. ಅದು ತಿರಸ್ಕೃತವಾಗಿದೆ.

ಶ್ರೀ ಎಸ್.ಎ. ರವೀಂದ್ರನಾಥ : ಇಲ್ಲಿ ಇಲ್ಲ ಎಂದು ಹೇಳುತ್ತಾರೆ. ಕೆ.ಎಸ್.ಆರ್.ಟಿ.ಸಿ.ಯಲ್ಲಿ ಅಥವಾ ಬೇರೆ ಕಡೆಯಲ್ಲಿ ಕೊಡುತ್ತಿದ್ದಾರೆ. ಇಲ್ಲಿ ಏಕೆ ಕೊಡುತ್ತಾ ಇಲ್ಲ. ಅದೇ ತರಹ ಇಲ್ಲಿ ಏಕೆ ಕೊಡಬಾರದು?

ಅಧ್ಯಕ್ಷರು : ಸರ್ಕಾರದಲ್ಲಿ ಪುನರ್ ಪರಿಶೀಲನೆ ಮಾಡಿ. ಅವರು ಪುನರ್ ಪರಿಶೀಲನೆ ಮಾಡುತ್ತಾರೆ.

ಶ್ರೀ ಡಿ.ಜಿ. ಜಯಕುಮಾರ್ : ಆಗಬಹುದು.

ರಾಜ್ಯದಲ್ಲಿ ಪ್ರಕೃತಿ ವಿಕೋಪಗಳಿಗೆ ಪ್ರತ್ಯೇಕ ನಿಧಿ

130 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಕಂದಾಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಕೃತ ವಿಕೋಪಗಳಿಂದಾಗುವ ಅನಾಹುತ ಎದುರಿಸಲು ಪ್ರತ್ಯೇಕ ನಿಧಿಯನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿದಿಯೇ? ಹಾಗಿದ್ದಲ್ಲಿ ಇದು ಎಂದಿನಿಂದ ಜಾರಿಗೊಳಿಸಲಾಗುವುದು?

ಆ) ಪ್ರಕೃತಿ ವಿಕೋಪಗಳು ಸಂಬಂಧಿಸಿದಾಗ ಸರ್ಕಾರವು 1995-96ನೇ ಸಾಲಿನಲ್ಲಿ ನಿಗಧಿತ ಹಣಕ್ಕಿಂತ ಹೆಚ್ಚು ವೆಚ್ಚ ಮಾಡಿದಿಯೇ? (ಹಾಗಿದ್ದಲ್ಲಿ ವಿವರಗಳನ್ನು ಒದಗಿಸುವುದು)

ಇ) ಪ್ರಕೃತಿ ವಿಕೋಪಗಳಿಗೆ ರಾಜ್ಯ ಸರ್ಕಾರಕ್ಕೆ ನೀಡುವ ಯೋಜನಾ ಬಾಬ್ತಿನ ಅನುದಾನದಲ್ಲಿ ಕೇಂದ್ರ ಸರ್ಕಾರ ಕಡಿತಗೊಳಿಸಿರವುದು ನಿಜವೇ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :